ಸಿಸಿ ನಂಃ  25/2024
ಪಿಡಬ್ಲ್ಯೂಃ 1
ದಿನಾಂಕಃ  14.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಪಿ    ವಕೀಲರಿಂದಃ

ನಾನು ಮೊಟ್ಟ ಮೊದಲಿಗೆ ಆರೋಪಿಯನ್ನು ಹಾಜರಾಗಿ  ಜಾಮೀನನ್ನು ಪಡೆದ ದಿನವೇ ನೊಡಿರುತ್ತೇನೆ ಎಂದರೆ ಸರಿಯಲ್ಲ .  ಆರೋಪಿಯನ್ನು ಎಷ್ಟು ವರ್ಷಗಳ ಹಿಂದೆ ನೋಡಿರುತ್ತೇನೆ ಎಂದರೆ  2023 ರಿಂದ ಎನ್ನುತ್ತಾರೆ. ಅದಕ್ಕೂ ಮುಂಚೆ  ಆರೋಪಿಯ ಪರಿಚಯ ನನಗೆ ಇಲ್ಲ ಮತ್ತು ನಾನು ಅವರನ್ನು ನೋಡಿಲ್ಲ ಎಂದರೆ ಸರಿ .  ಆರೋಪಿಯ ಊರು ಯಾವುದು ಎಂದರೆ ರೆಡ್ಡಿ ಹಳ್ಳಿ ಎನ್ನುತ್ತಾರೆ. ಅವರ ಮನೆಯನ್ನು ನಾನು ನೋಡಿಲ್ಲ.  ಆರೋಪಿ ನನಗೆ ಹೇಗೆ ಪರಿಚಯ ಎಂದರೆ ರಮೇಶ್ ಎನ್ನುವರು ನನಗೆ ಬಹಳ ಪರಿಚಯ . ಅವರು ನನ್ನ ಗೆಳೆಯರು ಅವರ ಮೂಲಕ ಪರಿಚಯ ಎನ್ನುತ್ತಾರೆ. ಸದರಿ ರಮೇಶ್ ಆರೋಪಿ  ಕಾಂತಮ್ಮನಿಗೆ  ಏನಾಗಬೇಕು ಎಂದರೆ  ಸಂಬಂಧ ದಲ್ಲಿ ಮಗ ಎನ್ನುತ್ತಾರೆ. ರಮೇಶ್ ರವರ ಕುಟುಂಬದ ಸದಸ್ಯರ ಪರಿಚಯ ಇದೆಯಾ ಅಂದರೆ  ಅವರ ಕುಟುಂಬದ ರಾಜಪ್ಪ  ಎನ್ನುವವರ ಪರಿಚಯ ಇದೆ ಎನ್ನುತ್ತಾರೆ.

ರಮೇಶ್ ರವರ ವಾಸ ಸ್ಥಳ  ಇಟ್ಟಿಗ  ರಾಗಲಪಲ್ಲಿ ಎನ್ನುತ್ತಾರೆ. ನನ್ನ ಮನೆಗೂ ಅವರ ಮನೆಗೂ ಎಷ್ಟು ಅಂತರ ಎಂದರೆ  15 ಕಿ. ಮೀ ಅಂತರ ಎನ್ನುತ್ತಾರೆ. ನನ್ನದು ಕೆಜಿಎಫ್ ತಾಲ್ಲೂಕು  , ರಮೇಶ್ ರವರು ಆಂದ್ರ ಪ್ರದೇಶದವರು ಎಂದರೆ ಸರಿ.  ಸದರಿ ರಮೇಶ್ ರವರ ಜೊತೆ  ಗೆಳೆತನ ಹೇಗೆ  ಆಯಿತು ಎಂದರೆ  ನಾನು ಟಮೆಟೋ  ಮಾರಲು ವಿಕೋಟಾ ಮಾರುಕಟ್ಟೆಗೆ ಹೋಗುತ್ತಿದ್ದೆ ಅಲ್ಲಿ ಅವರುಾ ಬರುತ್ತಿದ್ದು ಹಾಗಾಗಿ  ಪರಿಚಯ ಎನ್ನುತ್ತಾರೆ.  ಆ  ರೀತಿ  ಪರಿಚಯ ಆದಾಗ  ಅವರ ಕುಟುಂಬಸ್ದರು ಎಷ್ಟು ಜನರು ಇರುತ್ತಾರೆ ಎಂದು ತಿಳಿದುಕೊಂಡಿರುತೀರಾ ಎಂದರೆ ಇಲ್ಲ ಎನ್ನುತ್ತಾರೆ. ರಮೇಶ್ ಮತ್ತು ಆರೋಪಿಗೆ ಬಹಳಷ್ಟು ಆಸ್ತಿಗಳು ಇದೆ ಎಂದರೆ ಇದೆ  ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮೊಟ್ಟ ಮೊದಲಿಗೆ ಆರೋಪಿಯನ್ನು  ಎಲ್ಲಿ ಬೇಟಿಯಾಗಿದ್ದೆ ಎಂದರೆ ಬೇತಮಂಗಲದಲ್ಲಿ ಎನ್ನುತ್ತಾರೆ.  ಆರೋಪಿ ತನಗೆ ಕಷ್ಟ ಇದೆ ಎಂದು  ಹಣದ ಸಹಾಯ ಮಾಡಿ ಎಂದು  ನನ್ನ ಬಳಿ  ಏನಾದರು ಕೇಳಿರುತ್ತಾರೆಯೇ ಅಂದರೆ  ಹೌದು ಎನ್ನುತ್ತಾರೆ. ಯಾವ ಕಾರಣಕ್ಕಾಗಿ ಹಣ  ಕೇಳಿರುತ್ತಾರೆ ಎಂದರೆ  ನನ್ನ ಜಮೀನು ಇದೆ  ಅದನ್ನು ಮಾರಾಟ ಮಾಡಿ ವಾಪಸ್ ಮಾಡುತ್ತೇನೆ ಎಂದು ಹಣ ಪಡೆದಿರುತ್ತಾರೆ ಎನ್ನುತ್ತಾರೆ.  ಆ

ರೀತಿ ಹೇಳಿದಾಗ ಆರೋಪಿ ಮತ್ತು ರಮೇಶ್ ಇಬ್ಬರು ಇದ್ದರೇ ಅಂದರೆ ಹೌದು ಎನ್ನುತ್ತಾರೆ. ನಾನು ಅವರು ಹಣವನ್ನು ಜಮೀನು ಮಾಡಿ ಕೊಡುತ್ತೇವೆಂದು ಹೇಳಿದ ಮೇರೆಗೆ ಅವರಿಗೆ ಹಣವನ್ನು ನೀಡಿರುತ್ತೇನೆಯೇ ಅಂದರೆ ಹೌದು ಎನ್ನುತ್ತಾರೆ. ಸದರಿ ಹಣವನ್ನು ಆರೋಪಿ ಎಷ್ಟು ದಿನಗಳ ಒಳಗೆ ವಾಪಸ್ ಮಾಡುತ್ತೇನೆ ಎಂದು ಹೇಳಿರುತ್ತಾರೆ ಎಂದರೆ 8-9 ತಿಂಗಳು ಎನ್ನುತ್ತಾರೆ. ಆ ರೀತಿ ಹಣವನ್ನು 8-9 ತಿಂಗಳ ಒಳಗೆ ವಾಪಸ್ ಮಾಡುತ್ತೇವೆ ಎಂದು ಹೇಳಿದ ವಿಚಾರವನ್ನು ನನ್ನ ಪಿರ್ಯಾದಿ , ನೋಟೀಸ್ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತದಲ್ಲಿ ಹೇಳಿ ಬರೆಸಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಕಾಂತಮ್ಮನವರು ತಮ್ಮ ಆಸ್ತಿಯನ್ನು ಮಾರಿರುತ್ತಾರೆಯೇ ಅಂದರೆ ಹೌದು ಎನ್ನುತ್ತಾರೆ. ಸದರಿ ಆಸ್ತಿಯನ್ನು ದಿನಾಂಕ 8.07.2020 ರಲ್ಲಿಯೇ ಮಾರಾಟ ಮಾಡಲಾಗಿದೆ ಎಂದರೆ ಅವರ ಬಳಿ ಸುಮಾರು ಜಮೀನು ಇದೆ ಯಾವುದನ್ನು ಮಾರಾಟ ಮಾಡಿರುತ್ತಾರೆ ನನಗೇನು ಗೊತ್ತು ಎನ್ನುತ್ತಾರೆ.

ಈ ಸಮಯದಲ್ಲಿ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್